# ಕಪ್ಪು ಸುಂದರಿಯೆ


ನಾಗೇಶ ಹೆಗಡೆ

ಕಪ್ಪು ಬಣ್ಣವೆಂದು ಯಾರು ಹೇಳಿದರು ನಿನಗೆ
ಕಪ್ಪು ನಿತ್ಯ ಸತ್ಯ
ಎಲ್ಲವನು ಪೊರೆವ ಸತ್ಯ; ತೊರೆವ ಸತ್ಯ
ಸುಳ್ಳು ಇರುವುದಾದರೆ ಅದಕೆ ಕಪ್ಪು ಕಾರಣ
ಅದರ ಹೊರತು ಎಲ್ಲವೂ ಸುಳ್ಳೆಂದು ಒಪ್ಪುವೆ

ನಿನ್ನ ತುಟಿಗಳ ಮೇಲೆ ಎಲ್ಲರ ತಪ್ಪುಗಳು
ಅಚ್ಚಾದಂತಿವೆ; ಅಂತಲೆ ಅಷ್ಟು ಕಪ್ಪಿಟ್ಟಿವೆ
ಯಾರು ಯಾರು ಚುಂಬಿಸಿ ಅದನು ಹೀರಿದ್ದು
ಈ ಮೋಹಗಳ ನುಂಗಿದ್ದು? ನಿನ್ನ ಆತ್ಮವೆ?
ಅದಕೆಂತಹ ಬಣ್ಣ, ಕಪ್ಪಿಟ್ಟದ್ದಕ್ಕೆಲ್ಲ ಹೆಸರಿಡುವ
ಪ್ರಮೇಯ ಬೇಡ ನಮಗೆ
ಆತ್ಮವ ನಿನ್ನ ಹೆಸರಿನಿಂದಲೇ ಗುರುತಿಸಬಹುದು

ಸುಂದರಿ, ನಿನಗೆ ಗೊತ್ತಿರಲಿ
ತಪ್ಪುಗಳ ಲೆಕ್ಕ ಒಪ್ಪಿಸಬೇಕೆಂದರೆ
ಈ ಲೋಕ ನಿನ್ನೆದೆಯ ಕಡೆಗೆ
ಬಣ್ಣದ ಬಣ್ಣನೆಗಳ ದಾಟಿ ಮರಳಬೇಕಿದೆ

● ಚ. ಲಿಂಗರಾಜ ಸೊಟ್ಟಪ್ಪನವರ